# ಸೇವಾಯಾನ ಟ್ರಸ್ಟ್ (ರಿ.)

#723, ಸುಪ್ರಿಯಾ ಆಸ್ಪತ್ರೆ ಹತ್ತಿರ, ಹೊಸಬೀದಿ, ಹಿನಕಲ್, ಮೈಸೂರು

ನೋಂದಣಿ ಸಂಖ್ಯೆ :MYW-4-00269-2019-20

## 2020-2021ರ ವಾರ್ಷಿಕ ವರದಿ




ಇ-ಮೇಲ್ : sevayanatrust@gmail.com

ಫೇಸ್ ಬುಕ್: Sevayana Trust Mysore

ವೆಬ್ ಸೈಟ್ : www.sevayanatrust.com

ಮೊ : 9535426335, 9513984848

Scanned with Oken Scanner


## ಸೇವಾಯಾನ ಸಂಸ್ಥೆಯ ಕುರಿತು :

ಕೆಲವೊಂದು ಸ್ವಯಂಸೇವಾ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿ, ವಿವಿಧ ಸೇವಾ ಕ್ಷೇತ್ರಗಳಲ್ಲಿ ಪರಿಣಿತಿ ಪಡೆದ ಯುವ ಪಡೆಯೊಂದು, ಸಮಾಜದಲ್ಲಿ ಹಿರಿಯ ನಾಗರೀಕರ ಕಲ್ಯಾಣ ಕಾರ್ಯಕ್ರಮಗಳು, ಮಹಿಳಾ ಸಬಲೀಕರಣ, ಸಮುದಾಯ ಅಭಿವೃದ್ಧಿ ಮೊದಲಾದ ಉದ್ದೇಶಗಳೊಂದಿಗೆ ಸ್ಥಾಪಿಸಿದ ಸಂಸ್ಥೆಯೇ ಸೇವಾಯಾನ ಟ್ರಸ್ಟ್. ಸಂಸ್ಥೆಯು 2019ರಲ್ಲಿ ತನ್ನ ಸಾಮಾಜಮುಖಿ ಚಟುವಟಿಕೆಗಳನ್ನು ಪ್ರಾರಂಭಿಸಿದ್ದಾಗ್ಯೂ, 08ನೇ ಜನವರಿ 2020ರಂದು ಅಧಿಕೃತವಾಗಿ ನೋಂದಣಿಗೊಂಡು, ಹಿನಕಲ್‌ನಲ್ಲಿ ಬಾಡಿಗೆ ಕಟ್ಟಡವೊಂದನ್ನು ಪಡೆದು, ಅದರ ಮೂಲಕ ಕಾರ್ಯಚಟುವಟಿಕೆಗಳನ್ನು ಪ್ರಾರಂಭಿಸಿತು.







**ಸೇವಾಯಾನ ಉದ್ಘಾಟನೆ**

ಮೈಸೂರು: ಸಾಮಾಜಿಕ ಸೇವೆಗೈಯಲಿಕ್ಕಾಗಿಯೇ ಹಿನಕಲ್‌ನಲ್ಲಿ ಸೇವಾಯಾನ ಸಂಸ್ಥೆ ಆರಂಭಗೊಂಡಿದೆ.

ನಾಗರತ್ನಮ್ಮ ಸಂಸ್ಥೆ ಉದ್ಘಾಟಿಸಿದರು. ಸಂಸ್ಥೆಯ ಅಧ್ಯಕ್ಷೆ ಪ್ರಭಾಮಣಿ ಸಂಸ್ಥೆ ಆರಂಭದ ಆಶೋತ್ತರಗಳನ್ನು ಹಂಚಿಕೊಂಡರು. ಪ್ರೊ.ಶಶಿಕಲಾ, ಉದ್ಯಮಿ ರಾಮು, ಹಿನಕಲ್ ಗ್ರಾ.ಪಂ.ಸದಸ್ಯೆ ನೇಹಾ, ಸಂಸ್ಥೆ ಕಾರ್ಯದರ್ಶಿ ಸಿ.ಎಂ.ಆಶಾ, ಧರ್ಮದರ್ಶಿ ಪ್ರಭು, ಪ್ರೇಮಲತಾ, ಎಂ.ಆಶಾ ಇದ್ದರು.

Scanned with Oken Scanner

ಧರ್ಮದರ್ಶಿಗಳ ವಿವರ :

ಪ್ರಭಾಮಣಿ.ಎಸ್–ಅಧ್ಯಕ್ಷರು
ಆಶಾ. ಎಂ. – ಕಾರ್ಯದರ್ಶಿಗಳು
ಮಂಜುನಾಥಸ್ವಾಮಿ–ಖಜಾಂಚಿ ಮತ್ತು
ಧರ್ಮದರ್ಶಿಗಳು
ಪ್ರಭುಶಂಕರ್ ಕೆ.ಎಂ - ಧರ್ಮದರ್ಶಿಗಳು
ರಂಜಿತ್ ಥಾಮಸ್ ಡಿಸ್ಸಾ -ಧರ್ಮದರ್ಶಿಗಳು



ವಿಷನ್
ಸ್ವಸ್ಥ, ಸುಸ್ಥಿರ ಮತ್ತು ಅಭಿವೃದ್ಧಿಪರ ಸಮಾಜದ ರಚನೆ
ಮಿಷನ್:
ಅಗತ್ಯ ಸೇವೆಗಳನ್ನು ಒದಗಿಸುವ ಮೂಲಕ ಸಾಮಾಜಿಕ ಅಭಿವೃದ್ಧಿಯನ್ನು ಸುಗಮಗೊಳಿಸುವುದು

ಉದ್ದೇಶಗಳು:
ಹಿರಿಯ ನಾಗರೀಕರ ಕಲ್ಯಾಣ ಕಾರ್ಯಕ್ರಮಗಳು

- ಹಿರಿಯ ನಾಗರೀಕರ ಆರೈಕೆ ಕೇಂದ್ರ ತೆರೆಯುವುದು
- ಹಿರಿಯ ನಾಗರೀಕರ ಸಹಾಯವಾಣಿ ತೆರೆಯುವುದು
- ಅಗತ್ಯ ಸರ್ಕಾರಿ ಸೇವೆಗಳನ್ನು ದೊರಕಿಸಿಕೊಡಲು ನೆರವಾಗುವುದು
- ವೃದ್ಧಾಪ್ಯದ ಅಂಚಿನಲ್ಲಿ ಗುಣಮಟ್ಟದ ಬದುಕನ್ನು ನಡೆಸಲು ಅಗತ್ಯವಾದ ಸ್ವಚ್ಛಂದ ವಾತಾವರಣವನ್ನು ಕಲ್ಪಿಸುವುದು

ಸಾಮಾಜಿಕ ಸಮಾನತೆ :

- ನಾಗರೀಕರ ಹಕ್ಕುಗಳ ಪೂರೈಕೆಗೆ ನೆರವು ನೀಡುವುದು
- ಫಲಾನುಭವಿಗಳು ಸರ್ಕಾರಿ ಸವಲತ್ತುಗಳನ್ನು ಪಡೆಯುವಲ್ಲಿ ಸಹಕಾರ ನೀಡುವುದು
- ಲಿಂಗ ತಾರತಮ್ಯದ ವಿರುದ್ಧ ಅರಿವು ಕಾರ್ಯಕ್ರಮಗಳನ್ನು ಆಯೋಜಿಸುವುದು

ಮಹಿಳಾ ಸಶಕ್ತತೆ :

- ಸಾಮಾಜಿಕ ಶೋಷಣೆಗೊಳಗಾದ ಮಹಿಳೆಯರಿಗೆ ರಕ್ಷಣೆ, ಪಾಲನೆ ಹಾಗೂ ನೆರವು ನೀಡುವುದು
- ಕೌಟುಂಬಿಕ ಸಲಹೆ, ಆಪ್ತಸಮಾಲೋಚನೆ ಹಾಗೂ ಕಾನೂನಿನ ನೆರವುಒದಗಿಸುವುದು
- ಸ್ವ ಸಹಾಯ ಸಂಘಗಳ ರಚನೆ ಹಾಗೂ ಸದಸ್ಯರ ಜೀವನ ಮಟ್ಟ ಸುಧಾರಣೆಗೆ ಒತ್ತು
- ವೃತ್ತಿಪರ ಹಾಗೂ ಜೀವನಕೌಶಲ್ಯ ತರಬೇತಿಗಳನ್ನು ನೀಡುವುದರ ಮೂಲಕ ಸದೃಢ ಹಾಗೂ ಸ್ವಾವಲಂಬಿಗಳನ್ನಾಗಿಸುವುದು
- ಸ್ವ ಉದ್ಯೋಗಕ್ಕೆ ಸಹಕಾರ ನೀಡಿ ಮಾರುಕಟ್ಟೆ ವ್ಯವಸ್ಥೆಯನ್ನು ಒದಗಿಸುವುದು

Scanned with Oken Scanner

ಮಕ್ಕಳ ಹಕ್ಕುಗಳ ರಕ್ಷಣೆ:

- ಶಿಕ್ಷಣದ ಗುಣಮಟ್ಟದ ಸುಧಾರಣೆಗೆ ಪ್ರಯತ್ನಿಸುವುದು
- ಸರ್ಕಾರಿ ಮತ್ತು ಅನುದಾನಿತ ಶಾಲಾ-ಕಾಲೇಜುಗಳ ಮಕ್ಕಳ ಕೌಶಲ ಹೆಚ್ಚಿಸಲು ತರಬೇತಿ ಹಾಗೂ ಕಾರ್ಯಗಾರಗಳನ್ನು ಆಯೋಜಿಸುವುದು
- ಅಶಕ್ತ ಪೋಷಕರ ಮಕ್ಕಳ ಶಿಕ್ಷಣಕ್ಕೆ ನೆರವು
- ಸಮುದಾಯ ಮಟ್ಟದಲ್ಲಿ ಸಾಮಾಜಿಕ ಸಮಸ್ಯೆಗಳ ಕುರಿತು ಅರಿವಿನ ಕಾರ್ಯಗಾರಗಳನ್ನು ನಡೆಸುವುದು

ಉತ್ತಮ ಸಮಾಜಕ್ಕಾಗಿ ಉತ್ತಮ ಆರೋಗ್ಯ:

- ಆರೋಗ್ಯ ಸಮಸ್ಯೆಗಳನ್ನು ಕುರಿತು ಸಮುದಾಯ ಮಟ್ಟದಲ್ಲಿಅರಿವು ಕಾರ್ಯಕ್ರಮಗಳನ್ನು ಆಯೋಜಿಸುವುದು
- ಹದಿಹರೆಯದವರಿಗೆ ಲೈಂಗಿಕ ವಿಚಾರಗಳ ಕುರಿತು ಅರಿವು ಮೂಡಿಸುವುದು
- ಆರೋಗ್ಯ ಶಿಬಿರಗಳನ್ನು ನಡೆಸುವುದು
- ಸಂಕಷ್ಟದಲ್ಲಿರುವ ಅನಾರೋಗ್ಯ ಪೀಡಿತ ಕುಟುಂಬಗಳಿಗೆ ನೆರವು ನೀಡುವುದು

ಸ್ವಚ್ಛ ಪರಿಸರ ಅಭಿಯಾನ:

- ಸ್ವಚ್ಛತೆಯ ಕುರಿತ ಅರಿವು ಮೂಡಿಸುವುದು
- ಪರಿಸರ ಸಂರಕ್ಷಣೆಯ ಬಗ್ಗೆ ಅರಿವು ಕಾರ್ಯಕ್ರಮಗಳನ್ನು ನಡೆಸುವುದು
- ಜಲ ಸಂರಕ್ಷಣೆಯ ಕುರಿತು ಕಾರ್ಯಕ್ರಮಗಳನ್ನು ಆಯೋಜಿಸುವುದು

ವಕಾಲತ್ತು:

- ಮಹಿಳೆಯರು, ಮಕ್ಕಳು ಮತ್ತು ಹಿರಿಯ ನಾಗರೀಕರ ಕಲ್ಯಾಣಕ್ಕಾಗಿ ಅಗತ್ಯ ನಿಯಮಗಳನ್ನು ಜಾರಿಗೊಳಿಸುವಲ್ಲಿ ವಕಾಲತ್ತು ವಹಿಸುವುದು

## ಅನುಷ್ಠಾನದಲ್ಲಿರುವ ಕಾರ್ಯಕ್ರಮಗಳು

### 1. ಹಿರಿಯ ನಾಗರೀಕರ ಆರೈಕೆ ಕೇಂದ್ರ

ಸಂಸ್ಥೆಯು ತನ್ನ ಮೊದಲನೆಯ ಕಾರ್ಯಕ್ರಮವಾಗಿ ಮಹಿಳಾ ಹಿರಿಯ ನಾಗರೀಕರಿಗಾಗಿ ಆರೈಕೆ ಕೇಂದ್ರವನ್ನು ಆರಂಭಿಸಿತು. ಇಲ್ಲಿ ಉತ್ತಮ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ತನ್ನ ಆಶ್ರಿತರಿಗೆ ಗುಣಮಟ್ಟದ, ಸ್ವಚ್ಛಂದವಾದ ಹಾಗೂ ಕೌಟುಂಬಿಕ ವಾತಾವರಣವನ್ನು ಕಲ್ಪಿಸಿಕೊಟ್ಟಿದೆ.


Scanned with Oken Scanner


ಮೂಲಭೂತ ಸೌಲಭ್ಯಗಳು






- ಆಪ್ತಸಮಾಲೋಚನೆ





- ವೈದ್ಯಕೀಯ ತಪಾಸಣೆ ಹಾಗೂ ನೆರವು






Scanned with Oken Scanner

2. ವೃತ್ತಿ ತರಬೇತಿ ಕಾರ್ಯಕ್ರಮಗಳು

- ಟೈಲರಿಂಗ್ ತರಬೇತಿ

ಆರ್ಥಿಕವಾಗಿ ಹಿಂದುಳಿದಿರುವ ಸಮುದಾಯಗಳ ಆಸಕ್ತ ಮಹಿಳೆಯರಿಗೆ ಕೌಶಲಾಭಿವೃದ್ಧಿ ಹಾಗೂ ವೃತ್ತಿಪರ ತರಬೇತಿಗಳನ್ನು ಆಯೋಜಿಸಿ, ಆ ಮೂಲಕ ಅವರನ್ನು ಆರ್ಥಿಕವಾಗಿ ಸಬಲರಾಗುವಂತೆ ಮಾಡಲು ಪ್ರಯತ್ನಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದ್ದು, ಈಗಾಗಲೇ ಟೈಲರಿಂಗ್ ವೃತ್ತಿತರಬೇತಿಯನ್ನು ನಡೆಸಲಾಗುತ್ತಿದೆ.






- ಪೇಪರ್ ಬ್ಯಾಗ್ ತರಬೇತಿ

ಸೇವಾಯಾನ ಸಂಸ್ಥೆಯ ಅತ್ಯಂತ ಮಹತ್ವಕಾಂಕ್ಷಿ ತರಬೇತಿ ಇದಾಗಿದ್ದು, ದಾನಿಗಳಿಂದ ಸಂಗ್ರಹಿಸಲ್ಪಟ್ಟ ದಿನಪತ್ರಿಕೆಗಳಿಂದ ಸಂಸ್ಥೆಯ ಆಶ್ರಿತರು ದಿನದಲ್ಲಿ ಎರಡು ಗಂಟೆಗಳ ಕಾಲ ಪೇಪರ್ ಬ್ಯಾಗ್‌ಗಳನ್ನು ತಯಾರಿಸುತ್ತಾರೆ. ಅದಲ್ಲದೇ ಸ್ಥಳೀಯವಾಗಿ ಅಗತ್ಯವುಳ್ಳ ಮಹಿಳೆಯರಿಗೆ ಈ ತರಬೇತಿಯನ್ನು ನೀಡಿ, ಮನೆಯಲ್ಲೇ ಕುಳಿತು ಸ್ವ-ಉದ್ಯೋಗ ಮಾಡುವ ಅವಕಾಶವನ್ನು ಕಲ್ಪಿಸಿಕೊಡಲಾಗಿದೆ ಹಾಗೂ ಅವರು ತಯಾರಿಸಿದ ಬ್ಯಾಗ್‌ಗಳಿಗೆ ಮಾರುಕಟ್ಟೆಯನ್ನು ಸಹ ಒದಗಿಸಿಕೊಡಲಾಗುತ್ತಿದೆ. ಇದು ಮಹಿಳೆಯರನ್ನು ಸ್ವಾವಲಂಬಿಗಳನ್ನಾಗಿಸುತ್ತಿದ್ದು, ಅವರಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸುವ ಸಫಲ ಪ್ರಯತ್ನವಾಗಿದೆ.





Scanned with Oken Scanner

**ಸಂಸ್ಥೆಯ ವಾರ್ಷಿಕ ಚಟುವಟಿಕೆಗಳು :**

**ದಿನಾಂಕ: 06.04.2020**

"ಸೇವಾಯಾನ" ಹೊಸದಾಗಿ ಪ್ರಾರಂಭಗೊಂಡಿರುವ ಸ್ವಯಂ ಸೇವಾ ಸಂಸ್ಥೆಯಾಗಿದ್ದರೂ ಸಹ, ಕೋವಿಡ್-19ರ ಸಂಕಷ್ಟದ ಸಂದರ್ಭದಲ್ಲಿ ಸಮಾಜದ ಅಸಹಾಯಕರಿಗಾಗಿ ತನ್ನಿಂದಾದಷ್ಟು ಸೇವೆ ಮಾಡುವ ಸಂಕಲ್ಪದೊಂದಿಗೆ ದಿನಾಂಕ : 06.05.2020ರಂದು ಇನ್ನೂರಕ್ಕೂ ಅಧಿಕ ಮಂದಿಗೆ ಆಹಾರವನ್ನು ವಿತರಣೆ ಮಾಡಿತು.





**ದಿನಾಂಕ: 08.04.2020**

ಕೊರೊನಾ ಸಮಸ್ಯೆಯ ಹೊಡೆತದಿಂದ ಒಂದೊತ್ತಿನ ಊಟಕ್ಕೂ ಕಷ್ಟಪಡುತ್ತಿದ್ದ ಬಹಳಷ್ಟು ಜನರನ್ನು ಮೊದಲನೆಯ ದಿನ ಆಹಾರ ವಿತರಣೆಗಾಗಿ ತೆರಳಿದಾಗ ನೋಡಿದೆವು. ಹೀಗಾಗಿ ಎರಡನೆಯ ದಿನ 400ಕ್ಕೂ ಅಧಿಕ ಆಹಾರದ ಪೊಟ್ಟಣಗಳು ಹಾಗೂ ನೀರಿನ ಬಾಟಲ್‌ಗಳನ್ನು ತೆಗೆದುಕೊಂಡು ಹೋಗಿ ಬಹಳಷ್ಟು ಜನರಿಗೆ ವಿತರಿಸಲಾಯಿತು





**ದಿನಾಂಕ : 16.04.2020**

ಸೇವಾಯಾನ ಸಂಸ್ಥೆಯಿಂದ ಕೊರೊನಾ ಪರಿಣಾಮವಾಗಿ ಸಂಕಷ್ಟಕ್ಕೆ ಸಿಲುಕಿದ ಕೆಲವು ಕುಟುಂಬಗಳಿಗೆ ಎರಡು ದಿನ ಆಹಾರವನ್ನು ವಿತರಿಸಿದೆವು. ಈ ಸಂದರ್ಭದಲ್ಲಿ ನಮಗನ್ನಿಸಿದ್ದು, ಒಂದು ಹೊತ್ತಿನ ಊಟ ನೀಡುವ ಬದಲು ಆಹಾರದ ಕಿಟ್ ನೀಡಿದರೆ, ಇಡೀ ಕುಟುಂಬ ನಾಲ್ಕಾರು ದಿನ ಊಟ ಮಾಡಬಹುದು ಎಂದು. ಹೀಗಾಗಿಯೇ ಹೂಟಗಳ್ಳಿ, ಹಿನಕಲ್ ಹಾಗೂ ಎಸ್ ಆರ್ ಎಸ್ ಕಾಲೋನಿಯ ಕೆಲವು ಕುಟುಂಬಗಳಿಗೆ ಆಹಾರ ಪದಾರ್ಥಗಳ ಕಿಟ್ ಅನ್ನು ವಿತರಿಸಲಾಯಿತು.






**ದಿನಾಂಕ : 18.04.2020**

ಸೇವಾಯಾನ ಸಂಸ್ಥೆಯಿಂದ ಕುಂಬಾರಕೊಪ್ಪಲು, ಮೇಟಗಳ್ಳಿ, ಸರಸ್ವತಿಪುರಂ, ಟಿ.ಕೆ.ಲೇಓಟ್, ಯಾದವಗಿರಿ ಸ್ಥಳಗಳನ್ನು ಆಯ್ಕೆ ಮಾಡಿಕೊಂಡು ಈ ಸ್ಥಳಗಳಲ್ಲಿ ಮಾರಣಾಂತಿಕ ಕಾಯಿಲೆಗಳಿಂದ ಬಳಲುತ್ತಿರುವ ಕೆಲವು ಕುಟುಂಬಗಳಿಗೆ ಆಹಾರ ಪದಾರ್ಥಗಳ ಕಿಟ್ ಅನ್ನು ವಿತರಿಸಲಾಯಿತು.



**ದಿನಾಂಕ: 25.04.2020**

"ಸೇವಾಯಾನ"ದ ಕೆಲಸಗಳಿಗೆ ಬೆಂಬಲವಾಗಿ ಬಹಳಷ್ಟು ಸಹೃದಯರು ಸಹಾಯಹಸ್ತ ಚಾಚಿದ್ದನ್ನು ನಾವು ಸ್ಮರಿಸಲೇ ಬೇಕು. ಪರಿಣಾಮವಾಗಿ ದಿನಾಂಕ : 25.04.2020ರಂದು ಹಿನಕಲ್ ರಿಂಗ್‌ರಸ್ತೆಯ ಬಳಿ ಹಾಗೂ ಹಿನಕಲ್‌ನಲ್ಲಿ ಅವಶ್ಯಕತೆಯುಳ್ಳ ಕುಟುಂಬಗಳನ್ನು ಗುರುತಿಸಿ, ಆಹಾರ ಪದಾರ್ಥಗಳ ಕಿಟ್ ಅನ್ನು ವಿತರಿಸಲಾಯಿತು.





**ದಿನಾಂಕ: 28.04.2020**

"ಸೇವಾಯಾನ" ಹೆಸರೇ ಸೂಚಿಸುವಂತೆ ನಮ್ಮದೊಂದು ಸಣ್ಣ ಸಮಾಜಸೇವೆಯ ಪ್ರಯಾಣ. ಯಾರೋ ಸಹಾಯ ಮಾಡುತ್ತಾರೆ, ಮತ್ತ್ಯಾರೋ ಸಹಾಯ ಪಡೆಯುತ್ತಾರೆ. ಇಲ್ಲಿ ನಾವು ನೆಪವಷ್ಟೇ. ಈ ದಿನ ನಾವು ಲಕ್ಷ್ಮಿಕಾಂತನಗರ, ಅಭಿಷೇಕ್ ಸರ್ಕಲ್ ಬಳಿ, ಕುಂಬಾರಕೊಪ್ಪಲು, ಲೋಕನಾಯಕನಗರ, ಮಹದೇಶ್ವರ ಬಡಾವಣೆ ಹಾಗೂ ಹಿನಕಲ್‌ನ ಕೆಲವು ಅಗತ್ಯವುಳ್ಳ ಕುಟುಂಬಗಳಿಗೆ ಆಹಾರ ಪದಾರ್ಥಗಳ ಕಿಟ್ ವಿತರಿಸಿದೆವು.





Scanned with Oken Scanner

**ದಿನಾಂಕ: 29.04.2020**

"ಸೇವಾಯಾನ" ಆಹಾರ ಪದಾರ್ಥಗಳ ಕಿಟ್ ವಿತರಿಸಲು ಪ್ರಾರಂಭಿಸಿದ್ದೇ ತಡ. ಕೆಲವರು ನಮಗೆ ನೇರ ಆಹಾರ ಪದಾರ್ಥಗಳನ್ನು ಹಾಗೂ ಆಹಾರ ಪದಾರ್ಥಗಳನ್ನು ಕೊಳ್ಳಲು ಹಣದ ನೆರವನ್ನು ನೀಡಿದರು. ಪಡೆದದ್ದನ್ನು ಅಗತ್ಯವುಳ್ಳವರಿಗೆ ತಲುಪಿಸುವ ಕೆಲಸದಲ್ಲಿ ಒಂದಷ್ಟು ಸರ್ವೆ ಸಹ ನಡೆಸಿ, ತೀರಾ ಸಂಕಷ್ಟದಲ್ಲಿರುವ ಕೆಲವು ಕುಟುಂಬಗಳನ್ನು (ಹಿನಕಲ್, ಕುಂಬಾರ ಕೊಪ್ಪಲು, ಹೂಟಗಳ್ಳಿ, ಹೆಬ್ಬಾಳ್ ಹಾಗೂ ವಿಜಯನಗರ ಎರಡನೆಯ ಹಂತ)ಗುರುತಿಸಿ ದಿನಾಂಕ: 29.04.2020ರಂದು ಸೇವಾಯಾನ ಸಂಸ್ಥೆಯ ಆವರಣದಲ್ಲೇ ಆಹಾರ ಪದಾರ್ಥಗಳ ಕಿಟ್ ವಿತರಿಸಿದೆವು.






**ದಿನಾಂಕ: 02.05.2020**

"ಸೇವಾಯಾನ" ಈ ಮೊದಲು ಸಂಸ್ಥೆಯ ಸುತ್ತಮುತ್ತಲಿನ ಪ್ರದೇಶಗಳಿಗಷ್ಟೇ ಸೀಮಿತಗೊಳಿಸಿಕೊಂಡಿದ್ದ ತನ್ನ ಸೇವಾ ಕಾರ್ಯಗಳನ್ನು ಈ ಕಾರ್ಯಕ್ರಮದ ಮೂಲಕ ಮತ್ತಷ್ಟು ವಿಸ್ತರಿಸಿಕೊಂಡಿತು. ಮೈಸೂರಿನ ಟೆರೀಷಿಯನ್ ಕಾಲೇಜು ಸಮೀಪದ ರಾಘವೇಂದ್ರನಗರಕ್ಕ ತೆರಳಿ, ಅಲ್ಲಿನ ಸ್ನೇಹಿತರ ಮೂಲಕ ಅಗತ್ಯವುಳ್ಳ ಕುಟುಂಬಗಳನ್ನು ಗುರುತಿಸಿ ದಿನಸಿ ಪದಾರ್ಥಗಳ ಕಿಟ್‌ಗಳನ್ನು ವಿತರಿಸಿತು. ಕಟ್ಟಡ ಕಾರ್ಮಿಕರು, ಮನೆ ಕೆಲಸದವರು, ದಿನಗೂಲಿ ನೌಕರರು, ಅಲೆಮಾರಿ ಜನಾಂಗದವರು ಇಂದಿನ ಫಲಾನುಭವಿಗಳಾಗಿದ್ದರು.






Scanned with Oken Scanner

**ದಿನಾಂಕ: 05.05.2020**

"ಸೇವಾಯಾನ" ಹಿರಿಯ ನಾಗರೀಕರ ಆರೈಕೆಯ ಮುಖ್ಯ ಉದ್ದೇಶವನ್ನು ಹೊಂದಿದೆಯಾದರೂ, ಕೊರೋನಾದಂತಹ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಸಮಾಜಮುಖಿಯಾಗಿ ತನ್ನನ್ನು ತೊಡಗಿಸಿಕೊಂಡು, ಶಕ್ತರ ಸಹಾಯವನ್ನು ಅಶಕ್ತರಿಗೆ ತಲುಪಿಸವಲ್ಲಿ ಒಂದು ಸಾಮಾಜಿಕ ಕೊಂಡಿಯಾಗಿ ನಿಂತುಕೊಂಡಿತು. ಅಂತೆಯೇ ದಿನಾಂಕ- 05.05.2020ರಂದು ಹಿನಕಲ್ ರಿಂಗ್‌ರಸ್ತೆಯ ಒಂದು ಬದಿಗೆ ಅಂಟಿಕೊಂಡಂತಿರುವ ಹಿಂದುಳಿದ ಪ್ರದೇಶವೊಂದಕ್ಕೆ ತೆರಳಿ ( ನನ್ನೇಶ್ವರ ನಗರ) ಅಲ್ಲಿನ ಜನರಿಗೆ ದಿನಸಿ ಪದಾರ್ಥಗಳ ಕಿಟ್‌ಗಳನ್ನು ವಿತರಿಸಿದೆವು.





**ದಿನಾಂಕ: 10.05.2020**

"ಸೇವಾಯಾನ" ಸಂಸ್ಥೆಯ ವತಿಯಿಂದ ಹಿನಕಲ್, ಹೆಬ್ಬಾಳ್, ಲಕ್ಷ್ಮಿಕಾಂತನಗರ, ವಿಜಯನಗರ, ಕುಂಬಾರಕೊಪ್ಪಲು, ಹೀಗೆ ಕೆಲವೊಂದು ಸ್ಥಳಗಳಲ್ಲಿನ ಕೂಲಿಕಾರ್ಮಿಕರು, ಕಟ್ಟಡ ಕಾರ್ಮಿಕರು, ಪೌರ ಕಾರ್ಮಿಕರು ಮೊದಲಾದವರ ಮನೆಗಳಿಗೆ ಭೇಟಿ ನೀಡಿ, ಅವರಿಗೆ ಕೋವಿಡ್-19 ಹರಡುವ ಬಗ್ಗೆ ಅರಿವನ್ನು ಮೂಡಿಸಲಾಯಿತು. ಈ ಸಂದರ್ಭದಲ್ಲಿ ನಾವು ಗಮನಿಸಿದಾಗ, ಸಂಕಷ್ಟದಲ್ಲಿದ್ದಾರೆ ಎಂದೆನಿಸಿದ ಕುಟುಂಬಗಳಿಗೆ ಒಂದಿಷ್ಟು ಆಹಾರ ಪದಾರ್ಥಗಳನ್ನು ವಿತರಿಸುವ ಸೇವಾಯಾನ ಸಂಸ್ಥೆಯ ಆವರಣದಲ್ಲಿ ಮಾಡಲಾಯಿತು.





Scanned with Oken Scanner

**ದಿನಾಂಕ: 17.09.2020**

ಸೇವಾಯಾನ ಸಂಸ್ಥೆಯು ಪ್ಯಾಮಿಲಿ ಪ್ಲಾನಿಂಗ್ ಅಸೋಷಿಯೇಷನ್ ಇಂಡಿಯಾ ಸಂಸ್ಥೆಯ ಸಹಯೋಗದೊಂದಿಗೆ ಕೊರೋನಾ ಸಂಬಂಧಿ ಅರಿವಿನ ಕಾರ್ಯಕ್ರಮವನ್ನು ದಿನಾಂಕ : 17.09.2020ರಂದು ಆಯೋಜಿಸಿತ್ತು. ಈ ಸಂದರ್ಭದಲ್ಲಿ ಹಿನಕಲ್ ಸುತ್ತಮುತ್ತಲಿನ ಹಿಂದುಳಿದ ಪ್ರದೇಶದ ಒಂದಿಷ್ಟು ಜನರಿಗೆ ಕೊರೊನಾ ಹರಡುವ ಬಗ್ಗೆ ಮುನ್ನೆಚ್ಚರಿಕಾ ಕ್ರಮಗಳು, ಸೋಂಕು ತಡೆಗಟ್ಟುವಿಕೆಯಲ್ಲಿ ಜನಸಾಮಾನ್ಯರ ಜವಾಬ್ದಾರಿಗಳ ಬಗ್ಗೆ ಅರಿವು ಮೂಡಿಸಲಾಯಿತು. ಇದೇ ಸಂದರ್ಭದಲ್ಲಿ ಮಾಸ್ಕ್‌ಗಳನ್ನು ಮತ್ತು ಮೈಲೋ ಹಾಲಿನ ಪುಡಿಯನ್ನು ವಿತರಿಸಲಾಯಿತು.





**ದಿನಾಂಕ: 19.09.2020**

ಸೇವಾಯಾನ ಸಂಸ್ಥೆಯು, ಪ್ಯಾಮಿಲಿ ಪ್ಲಾನಿಂಗ್ ಅಸೋಷಿಯೇಷನ್ ಇಂಡಿಯಾದ ಸಹಭಾಗಿತ್ವದೊಂದಿಗೆ ಕೊರೋನಾ ಸಂಬಂಧಿ ಅರಿವಿನ ಕಾರ್ಯಕ್ರಮವನ್ನು ಎಸ್.ಆರ್.ಎಸ್. ಕಾಲೋನಿಯ ಸಮೀಪದಲ್ಲಿ ಆಯೋಜಿಸಿತ್ತು. ಈ ಸಂದರ್ಭದಲ್ಲಿ ಮಾಸ್ಕ್ ಮತ್ತು ಮೈಲೋ ಹಾಲಿನ ಪ್ಯಾಕೆಟ್‌ಗಳನ್ನು ವಿತರಿಸಲಾಯಿತು.





Scanned with Oken Scanner

**ದಿನಾಂಕ: 22.09.2020**

ಸೇವಾಯಾನ ಸಂಸ್ಥೆಯು, ಪ್ಯಾಮಿಲಿ ಪ್ಲಾನಿಂಗ್ ಅಸೋಷಿಯೇಷನ್ ಇಂಡಿಯಾದ ಸಹಭಾಗಿತ್ವದೊಂದಿಗೆ ಕೊರೋನಾ ಸಂಬಂಧಿ ಅರಿವಿನ ಕಾರ್ಯಕ್ರಮವನ್ನು ಮಹಾಲಕ್ಷ್ಮಿ ಬಡಾವಣೆಯಲ್ಲಿ ಆಯೋಜಿಸಿತ್ತು. ಸಾಮಾಜಿಕ ಅಂತರ, ಮಾಸ್ಕ್ ಬಳಕೆ, ದೈಹಿಕ ಸ್ವಚ್ಚತೆಗಳ ಪ್ರಾಮುಖ್ಯತೆಯ ಬಗ್ಗೆ ತಿಳಿಸಲಾಯಿತು. ಈ ಸಂದರ್ಭದಲ್ಲಿ ಮಾಸ್ಕ್ ಮತ್ತು ಮೈಲೋ ಹಾಲಿನ ಪೌಡರ್ ಪ್ಯಾಕೆಟ್‌ಗಳನ್ನು ವಿತರಿಸಲಾಯಿತು.






**ದಿನಾಂಕ: 06.10.2020**

ಜನಸಮುದಾಯಕ್ಕೆ ಕೋವಿಡ್-19ರ ಕುರಿತು ಮತ್ತಷ್ಟು ಜಾಗೃತಿ ನೀಡುವ ಸಲುವಾಗಿ ಸೇವಾಯಾನ ಸಂಸ್ಥೆಯು, ಫ್ಯಾಮಿಲಿ ಪ್ಲಾನಿಂಗ್ ಅಸೋಷಿಯೇಷನ್ ಆಫ್ ಇಂಡಿಯಾದ ಸಹಯೋಗದಲ್ಲಿ ಎಸ್.ಆರ್.ಎಸ್ ಕಾಲೋನಿಯಲ್ಲಿ ಕಾರ್ಯಕ್ರಮವನ್ನು ಆಯೋಜಿಸಿ, ನೆರೆದಿದ್ದವರಿಗೆ ಮೈಲೋ ಹಾಲಿನ ಪುಡಿ ಪ್ಯಾಕೆಟ್‌ಗಳನ್ನು ವಿತರಿಸಲಾಯಿತು.






Scanned with Oken Scanner

**ದಿನಾಂಕ : 11.10.2020**


ರೋಗದೊಡನೆ ಭಯ, ಆತಂಕಗಳು ಸೇರಿಕೊಂಡು ಮನುಷ್ಯರನ್ನು ಮಾನಸಿಕವಾಗಿ ಹಾಗೂ ದೈಹಿಕವಾಗಿ ಕುಗ್ಗಿಸುತ್ತಿರುವಂತಹ ಸಂದರ್ಭದಲ್ಲಿ ಕೊರೊನಾ ಕುರಿತು ಸಾಮಾಜಿಕ ಅರಿವು ಮೂಡಿಸುವ ಸಣ್ಣ ಪ್ರಯತ್ನವನ್ನು ಸೇವಾಯಾನ ಸಂಸ್ಥೆ ಪ್ರಾರಂಭದಿಂದಲೂ ಮಾಡುತ್ತಲೇ ಬಂದಿತ್ತು. ಅಂತೆಯೇ ದಿನಾಂಕ: 11.10.2020ರಂದು ಹೂಟಗಳ್ಳಿಯಲ್ಲಿ ಕೊರೊನಾ ಅರಿವು ಕಾರ್ಯಕ್ರಮವನ್ನು ಆಯೋಜಿಸಿಲಾಯಿತು ಹಾಗೂ ಈ ಸಂದರ್ಭದಲ್ಲಿ ಮೈಲೋ ಹಾಲಿನ ಪುಡಿಯನ್ನು ವಿತರಿಸಲಾಯಿತು.





**ದಿನಾಂಕ : 01.11.2020**

ಸಂಸ್ಥೆಯ ಸುತ್ತಮುತ್ತಲಿನ ಮಕ್ಕಳಿಗೆ ಪೌಷ್ಠಿಕಾಂಶಯುಕ್ತ ಹಾಲಿನ ಪುಡಿಯನ್ನು ವಿತರಿಸಲಾಯಿತು.






Scanned with Oken Scanner



ದಿನಾಂಕ :04.11.2020:

ಡಾ. ಜ್ಯೋತಿಲಕ್ಷ್ಮಿ ಎಂಬುವರು ಸೇವಾಯಾನ ಸಂಸ್ಥೆಗೆ ಬೇಟಿ ನೀಡಿ ತಮ್ಮ ಹುಟ್ಟುಹಬ್ಬದ ಪ್ರಯುಕ್ತ ದಿನಸಿ ಪದಾರ್ಥಗಳನ್ನು ನೀಡಿರುತ್ತಾರೆ.




ದಿನಾಂಕ :19.12.2022

ಅಪೋಲೋ ಆಸ್ಪತ್ರೆಯ ಹೃದ್ರೋಗ ತಜ್ಞರಾದ

ಡಾ. ಜಯಕುಮಾರ್‌ರವರು ಸೇವಯಾನ ಸಂಸ್ಥೆಗೆ ಭೇಟಿ ನೀಡಿ, ಆಶ್ರಿತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಮೂರು ದಿವಾನ್ ಕಾಟ್‌ಗಳನ್ನು ನೀಡಿರುತ್ತಾರೆ.

ದಿನಾಂಕ :21.12.2022

"ವಯೋವೃದ್ಧರ ದೈಹಿಕ ಹಾಗೂ ಮಾನಸಿಕ ಸಮಸ್ಯೆಗಳು ಮತ್ತು ಅವುಗಳ ನಿರ್ವಹಣೆಯಲ್ಲಿ ಸ್ವಪ್ರಯತ್ನದ ಮಹತ್ವ" ಎಂಬ ವಿಚಾರವಾಗಿ ಶಾರದಾ ವಿಲಾಸ ಕಾಲೇಜಿನ ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಶಶಿಕಲಾರವರು ಸೇವಾಯಾನ ಸಂಸ್ಥೆಯ ಹಿರಿಯರೊಂದಿಗೆ ಸಂವಾದ ನಡೆಸಿದ ಸಂದರ್ಭದ ಆಯ್ದ ಛಾಯಾಚಿತ್ರಗಳು.





Scanned with Oken Scanner

**ದಿನಾಂಕ: 25.12.2020:**

ಶಾರದಾ ವಿಲಾಸ ಶಿಕ್ಷಣ ಸಂಸ್ಥೆಗಳ ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ರೂಪಾರಾವ್ ರವರು ಸೇವಾಯಾನ ಸಂಸ್ಥೆಗೆ ಭೇಟಿ ನೀಡಿ ಸಂಸ್ಥೆಯ ಆಶ್ರಿತರೊಡಗೂಡಿ ಕ್ರಿಸ್‌ಮಸ್ ಆಚರಣೆ ಮಾಡಿರುತ್ತಾರೆ.



**ದಿನಾಂಕ : 01.01.2021:**

ಹೊಸ ವರ್ಷಾಚರಣೆಯ ಪ್ರಯುಕ್ತ ಮೈಸೂರಿನ ಲಕ್ಷ್ಮಿಕಾಂತ ದೇವಾಲಯಕ್ಕೆ ಸಂಸ್ಥೆಯ ಆಶ್ರಿತರನ್ನು ಕರೆದುಕೊಂಡು ಹೋಗಲಾಗಿತ್ತು ಹಾಗೂ ಸುಖಧರೆ ಹೋಟೆಲ್‌ನಲ್ಲಿ ವಿಶೇಷ ಊಟ ಕೊಡಿಸಲಾಯಿತು.





**ದಿನಾಂಕ : 10.01.2022 :**

ಸೇವಾಯಾನ ಸಂಸ್ಥೆಯ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮವನ್ನು ಸಂಸ್ಥೆಯ ಆವರಣದಲ್ಲಿ ಆಯೋಜಿಸಲಾಯಿತು. ಸ್ಥಳೀಯ ಕಾರ್ಪೋರೇಟರ್ ಶ್ರೀ ಬೋಪಯ್ಯ, ಗ್ರಾಮ್ ಸಂಸ್ಥೆಯ ಮುಖ್ಯಸ್ಥರಾದ ಡಾ. ಆರ್. ಬಸವರಾಜು ಆರ್ ಶ್ರೇಷ್ಠ, ಸಮಾಜ ಸೇವಕರಾದ ಲಯನ್ ಡಾ.ವಿಶ್ವನಾಥ್, ಸ್ಥಳೀಯ ಮುಖಂಡರಾದ ಶ್ರೀ ಗೋಪಾಲಸ್ವಾಮಿ, ಶ್ರೀ.ಹೊನ್ನಪ್ಪ, ಸಂಸ್ಥೆಯ ಧರ್ಮದರ್ಶಿಗಳು, ದಾನಿಗಳು, ಟೈಲರಿಂಗ್ ತರಬೇತಿಯ ಪ್ರಶಿಕ್ಷಣಾರ್ಥಿಗಳು ಹಾಗೂ ಸಂಸ್ಥೆಯ ಅಶ್ರಿತರು ಹಾಜರಿದ್ದರು.

Scanned with Oken Scanner










ದಿನಾಂಕ :15.02.2022:

ಮಾನಸ ಗಂಗೋತ್ರಿಯ ಎಂ ಎಸ್ ಡಬ್ಲ್ಯೂ ವಿದ್ಯಾರ್ಥಿಗಳು ಸೇವಯಾನ ಸಂಸ್ಥೆಗೆ ಭೇಟಿ ನೀಡಿ ಸಂಸ್ಥೆಯ ಕಾರ್ಯ ಚಟುವಟಿಕೆಗಳ ಬಗ್ಗೆ ತಿಳಿದುಕೊಂಡರು.





ದಿನಾಂಕ :08.03.2021:

ಮೈಸೂರು ಎಲೈಟ್ ಲೇಡಿಸ್ ಸರ್ಕಲ್ -141 ಸದಸ್ಯರು ಸಂಸ್ಥೆಗೆ ಭೇಟಿ ನೀಡಿ ಸಂಸ್ಥೆ ನಡೆಸುತ್ತಿರುವ ಟೈಲರಿಂಗ್ ವೃತ್ತಿ ತರಬೇತಿ ಘಟಕಕ್ಕೆ ಟೈಲರಿಂಗ್ ಮೆಷಿನ್ ನೀಡಿರುತ್ತಾರೆ.



## ಮಾಧ್ಯಮ ವರದಿಗಳು :


ಸೋಮವಾರ, 11 ಮೇ 2020

**ಸೇವಾಯಾನ ಸಂಸ್ಥೆಯಿಂದ ದಿನಸಿ ಸಾಮಗ್ರಿ ವಿತರಣೆ**

ಚೇತನ ಹಿರಿಯ ನಾಗರಿಕರ ಆರೈಕೆ ಕೇಂದ್ರದ ಸುಮಾರು 50 ಕುಟುಂಬಗಳಿಗೆ ಆಹಾರ ಕಿಟ್


ಮಂಗಳವಾರ • ಮೇ 12, 2020 ಪ್ರಜಾವಾಣಿ

ಚಿತ್ರಾವಳಿ


'ಸೇವಾಯಾನ' ಸಂಸ್ಥೆಯಿಂದ ಅಗತ್ಯವುಳ್ಳ ಕುಟುಂಬಗಳಿಗೆ ದಿನಸಿ ಸಾಮಗ್ರಿಗಳನ್ನು ವಿತರಿಸಲಾಯಿತು. ಸಂಸ್ಥೆಯ ಅಧ್ಯಕ್ಷೆ ಪ್ರಭಾಮಣಿ, ಧರ್ಮದರ್ಶಿಗಳಾದ ಎಂ.ಅನಿತಾ (ಅಂಜು), ಕೆ.ಎಂ.ಪ್ರಭುಶಂಕರ್, ಪ್ರೇಮಲತಾ, ಪ್ರೊ.ಶಶಿಕಲಾ, ನಾಗಾನಂದ್, ಸ್ವಯಂಸೇವಕರಾದ ಮಂಜು, ಮಲ್ಲೇಶ್, ಶಿವಸಂಜಪ್ಪ, ರಮೇಶ್, ಪ್ರಕಾಶ್, ಹಾಗೂ ಸಂಸ್ಥೆಯ ಕಾರ್ಯಕರ್ತರು ಇದ್ದಾರೆ



**ಸೇವಾಯಾನ ಸಂಸ್ಥೆಯಿಂದ ಕೊರೊನಾ ಅರಿವು ಕಾರ್ಯಕ್ರಮ**

ಮನೆಯಲ್ಲಿರುವ ಹಿರಿಯರು, ಮಕ್ಕಳು, ಅನಾರೋಗ್ಯಪೀಡಿತರ ಬಗ್ಗೆ ಎಚ್ಚರಿಕೆಯಿಂದ ಇರಬೇಕು: ಪ್ರಭಾಮಣಿ

Main Edition
Oct 10 2020 Page No. 1
Powered by : eReleGo.com


ವಿಜಯ ಕರ್ನಾಟಕ

ನಮ್ಮ ಮೈಸೂರು

## ಸೇವಾಯಾನ ಸಂಸ್ಥೆಯಿಂದ ಕೊರೊನಾ ಅರಿವು ಕಾರ್ಯಕ್ರಮ

ಮನೆಯಲ್ಲಿರುವ ಹಿರಿಯರು, ಮಕ್ಕಳು, ಅನಾರೋಗ್ಯಪೀಡಿತರ ಬಗ್ಗೆ ಎಚ್ಚರಿಕೆಯಿಂದ ಇರಬೇಕು: ಪ್ರಭಾಮಣಿ



## ಸೇವಾಯಾನ ಸಂಸ್ಥೆಯ ಸಂಸ್ಥಾಪನಾ ದಿನಾಚರಣೆ



### ಮಹಾಯೋಗಿ ವೇಮನ, ಅಂಬಿಗರ ಚೌಡಯ್ಯ, ಶ್ರೀ ಶಿವಯೋಗಿ ಸಿದ್ಧರಾಮೇಶ್ವರ ಅವರ ಜಯಂತಿ ಆಚರಣೆ

### ಅರ್ಜಿ ಆಹ್ವಾನ

## ಸೇವಾಯಾನ ಸಂಸ್ಥೆಯಿಂದ ವಿವೇಕಾನಂದ ಜಯಂತಿ ಆಚರಣೆ



ಮೈಸೂರು: ಸೇವಾಯಾನ ಸಂಸ್ಥೆ ವತಿಯಿಂದ ಪ್ರಥಮ ವರ್ಷದ ಸಂಸ್ಥಾಪನಾ ದಿನಾಚರಣೆ, ಸ್ವಾಮಿ ವಿವೇಕಾನಂದ ಜಯಂತಿ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ನಗರಪಾಲಿಕೆ ಸದಸ್ಯ ಎಸ್.ಯು. ಸುಬ್ಬಯ್ಯ, ಜನಪ್ರತಿನಿಧಿಗಳು ಮಾಡಬೇಕಾದ ಕೆಲಸವನ್ನು ಸ್ವಯಂ ಸೇವಾ ಸಂಸ್ಥೆಗಳು ಮಾಡುತ್ತಿರುವುದು ಸಂತೋಷದ ವಿಷಯ ಎಂದು ಹೇಳಿದರು.

ಗ್ರಾಮ್ ಸಂಸ್ಥೆಯ ಮುಖ್ಯಸ್ಥ ಡಾ. ಬಸವರಾಜು ಆರ್. ಶ್ರೇಷ್ಠ ಮಾತನಾಡಿದರು. ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ಪ್ರಭಾಮಣಿ, ಡಾ. ವಿಶ್ವನಾಥ್, ಗೋಪಾಲಸ್ವಾಮಿ, ಹಿನಕಲ್ ಗ್ರಾಪಂ ಮಾಜಿ ಅಧ್ಯಕ್ಷ ಹೊನ್ನಪ್ಪ, ಅಂಜು, ಶಾರದಾ ವಿಲಾಸ ಕಾಲೇಜಿನ ನಿವೃತ್ತ ಪ್ರಾಧ್ಯಾಪಕಿ ಶಶಿಕಲಾ, ಬಾಲ್ಯ ಫೌಂಡೇಷನ್‌ನ ಮುಖ್ಯಸ್ಥರಾದ ಉಮಾ, ಅನಿಲ್, ಸುಬುಧರ ಕಿರಣ್, ಎಸ್ ವಿವೈಎಂನ ಅರವಿಂದ್, ವಿಜಯನಗರ ಬಸವ ಸಮಿತಿಯ ಚೆನ್ನಬಸಪ್ಪ, ಆರ್.ಕೆ.ಸ್ವಾಮಿ, ನಂದಿನಿ, ಮಂಜುನಾಥಸ್ವಾಮಿ, ರಂಜಿತ್, ಪ್ರಭುಶಂಕರ್, ಜಾಹ್ನವಿ, ಕೆ.ವಿ.ಮಲ್ಲೇಶ್, ಕಿರಣ್, ವಿನೋದ್, ಸಿದ್ದು, ಸೋಮು, ವೃಷ್ಟಿ, ಗಾಯಿತ್ರಿ ಹಾಜರಿದ್ದರು.

## ಹಿರಿಯರಿಗಿಲ್ಲ ಮೂಲಭೂತ ಸೌಲಭ್ಯ





Rajyadharma News Channel

Link: https://youtu.be/-c8_wrBJTlM

ಧನ್ಯವಾದಗಳು.

# ಸೇವಾಯಾನ ಟ್ರಸ್ಟ್ (ರಿ.)

#723, ಸುಪ್ರಿಯಾ ಆಸ್ಪತ್ರೆ ಹತ್ತಿರ, ಹೊಸಬೀದಿ, ಹಿನಕಲ್, ಮೈಸೂರು

ನೋಂದಣಿ ಸಂಖ್ಯೆ : MYW-4-00269-2019-20

## 2021-2022ರ ವಾರ್ಷಿಕ ವರದಿ




ಇ-ಮೇಲ್ : sevayanatrust@gmail.com

ಫೇಸ್ ಬುಕ್: Sevayana Trust Mysore

ವೆಬ್ ಸೈಟ್ : www.sevayanatrust.com

ಮೊ : 9535426335, 9513984848

Scanned with Oken Scanner

## ಸೇವಾಯಾನ ಸಂಸ್ಥೆಯ ಕುರಿತು :

ಸೇವಾಯಾನ ಸಂಸ್ಥೆಯು ಸಮಾಜದಲ್ಲಿ ಹಿರಿಯ ನಾಗರೀಕರ ಕಲ್ಯಾಣ ಕಾರ್ಯಕ್ರಮಗಳು, ಮಹಿಳಾ ಸಬಲೀಕರಣ, ಸಮುದಾಯ ಅಭಿವೃದ್ಧಿ ಮೊದಲಾದ ಉದ್ದೇಶಗಳೊಂದಿಗೆ ಪ್ರಾರಂಭಗೊಂಡ ಸಂಸ್ಥೆಯಾಗಿದ್ದು, ೦೮ನೇ ಜನವರಿ 2020ರಂದು ಅಧಿಕೃತವಾಗಿ ನೋಂದಣಿಗೊಂಡಿದೆ. 2019-20 ಹಾಗೂ 2020-21ನೇ ಸಾಲಿನಲ್ಲಿ "ಹಿರಿಯ ನಾಗರೀಕರ ಆರೈಕೆ ಕೇಂದ್ರವನ್ನು ಪ್ರಾರಂಭಿಸಿ 65 ಜನರು ಮಹಿಳಾ ಹಿರಿಯ ನಾಗರೀಕರಿಗೆ ಆಶ್ರಯ ಹಾಗೂ ಪುರ್ನವಸತಿ ಕಾರ್ಯಗಳನ್ನು ನಡೆಸಿದೆ. ಎರಡು ಕಾರ್ಯಕ್ರಮಗಳ ಮೂಲಕ ಆರ್ಥಿಕವಾಗಿ ಹಿಂದುಳಿದ 40 ಮಂದಿ ಮಹಿಳೆಯರಿಗೆ ಟೈಲರಿಂಗ್ ವೃತ್ತಿ ತರಬೇತಿಯನ್ನು ನೀಡಿದೆ. ಸಂಸ್ಥೆಯ ಅಶ್ರಿತರಿಗೆ ದೇವರನಾಮ, ಧ್ಯಾನ, ಪ್ರಾಣಯಾಮ ಮೊದಲಾದ ಬೆಳಗಿನ ತರಬೇತಿಗಳ ಜೊತೆಗೆ ಬಿಡುವಿನ ಸಮಯದಲ್ಲಿ ಪೇಪರ್‌ಬ್ಯಾಗ್ ತಯಾರಿಕೆಯನ್ನು ಮಾಡಿಸಲಾಗುತ್ತದೆ. ಸಂಜೆ ಸಮಯದಲ್ಲಿ ಮನೋರಂಜನೆ, ವಾಯುವಿಹಾರ ಕಡ್ಡಾಯವಾಗಿರುತ್ತದೆ. ಪೌಷ್ಠಿಕ ಆಹಾರ, ವೈದ್ಯರಿಂದ ಮಾಸಿಕ ತಪಾಸಣೆ, ವೈದ್ಯೋಪಚಾರ, ಬಿಸಿನೀರಿನ ವ್ಯವಸ್ಥೆ, ಒಳಾಂಗಣ ಆಟಗಳು, ವಿಹಾರಗಳು ಮೊದಲಾದ ಸವಲತ್ತುಗಳನ್ನು ಸಂಸ್ಥೆಯು ತನ್ನ ಆಶ್ರಿತರಿಗೆ ದೊರಕಿಸಿಕೊಟ್ಟಿದೆ.













Scanned with Oken Scanner



**ಸಂಸ್ಥೆಯ ಧರ್ಮದರ್ಶಿಗಳ ವಿವರ :**

ಪ್ರಭಾಮಣಿ.ಎಸ್–ಅಧ್ಯಕ್ಷರು

ಆಶಾ. ಎಂ. – ಕಾರ್ಯದರ್ಶಿಗಳು

ಮಂಜುನಾಥಸ್ವಾಮಿ–ಖಜಾಂಚಿ ಮತ್ತು ಧರ್ಮದರ್ಶಿಗಳು

ಪ್ರಭುಶಂಕರ್ ಕೆ.ಎಂ - ಧರ್ಮದರ್ಶಿಗಳು

ರಂಜಿತ್ ಥಾಮಸ್ ಡೆಸ್ಸಾ -ಧರ್ಮದರ್ಶಿಗಳು

**ವಿಷನ್**

ಸ್ವಸ್ಥ, ಸುಸ್ಥಿರ ಮತ್ತು ಅಭಿವೃದ್ಧಿಪರ ಸಮಾಜದ ರಚನೆ

**ಮಿಷನ್:**

ಅಗತ್ಯ ಸೇವೆಗಳನ್ನು ಒದಗಿಸುವ ಮೂಲಕ ಸಾಮಾಜಿಕ ಅಭಿವೃದ್ಧಿಯನ್ನು ಸುಗಮಗೊಳಿಸುವುದು

**ಉದ್ದೇಶಗಳು :**

**ಹಿರಿಯ ನಾಗರೀಕರ ಕಲ್ಯಾಣ ಕಾರ್ಯಕ್ರಮಗಳು**

- ಹಿರಿಯ ನಾಗರೀಕರ ಆರೈಕೆ ಕೇಂದ್ರ ತೆರೆಯುವುದು
- ಹಿರಿಯ ನಾಗರೀಕರ ಸಹಾಯವಾಣಿ ತೆರೆಯುವುದು
- ಅಗತ್ಯ ಸರ್ಕಾರಿ ಸೇವೆಗಳನ್ನು ದೊರಕಿಸಿಕೊಡಲು ನೆರವಾಗುವುದು
- ವೃದ್ಧಾಪ್ಯದ ಅಂಚಿನಲ್ಲಿ ಗುಣಮಟ್ಟದ ಬದುಕನ್ನು ನಡೆಸಲು ಅಗತ್ಯವಾದ ಸ್ವಚ್ಛಂದ ವಾತಾವರಣವನ್ನು ಕಲ್ಪಿಸುವುದು

**ಸಾಮಾಜಿಕ ಸಮಾನತೆ :**

- ನಾಗರೀಕರ ಹಕ್ಕುಗಳ ಪೂರೈಕೆಗೆ ನೆರವು ನೀಡುವುದು
- ಫಲಾನುಭವಿಗಳು ಸರ್ಕಾರಿ ಸವಲತ್ತುಗಳನ್ನು ಪಡೆಯುವಲ್ಲಿ ಸಹಕಾರ ನೀಡುವುದು
- ಲಿಂಗ ತಾರತಮ್ಯದ ವಿರುದ್ಧ ಅರಿವು ಕಾರ್ಯಕ್ರಮಗಳನ್ನು ಆಯೋಜಿಸುವುದು

**ಮಹಿಳಾ ಸಶಕ್ತತೆ :**

- ಸಾಮಾಜಿಕ ಶೋಷಣೆಗೊಳಗಾದ ಮಹಿಳೆಯರಿಗೆ ರಕ್ಷಣೆ, ಪಾಲನೆ ಹಾಗೂ ನೆರವು ನೀಡುವುದು
- ಕೌಟುಂಬಿಕ ಸಲಹೆ, ಆಪ್ತಸಮಾಲೋಚನೆ ಹಾಗೂ ಕಾನೂನಿನ ನೆರವುಒದಗಿಸುವುದು
- ಸ್ವ ಸಹಾಯ ಸಂಘಗಳ ರಚನೆ ಹಾಗೂ ಸದಸ್ಯರ ಜೀವನ ಮಟ್ಟ ಸುಧಾರಣೆಗೆ ಒತ್ತು
- ವೃತ್ತಿಪರ ಹಾಗೂ ಜೀವನಕೌಶಲ್ಯ ತರಬೇತಿಗಳನ್ನು ನೀಡುವುದರ ಮೂಲಕ ಸದೃಡ ಹಾಗೂ ಸ್ವಾವಲಂಬಿಗಳನ್ನಾಗಿಸುವುದು
- ಸ್ವ ಉದ್ಯೋಗಕ್ಕೆ ಸಹಕಾರ ನೀಡಿ ಮಾರುಕಟ್ಟೆ ವ್ಯವಸ್ಥೆಯನ್ನು ಒದಗಿಸುವುದು

Scanned with Oken Scanner

**ಮಕ್ಕಳ ಹಕ್ಕುಗಳ ರಕ್ಷಣೆ:**

- ಶಿಕ್ಷಣದ ಗುಣಮಟ್ಟದ ಸುಧಾರಣೆಗೆ ಪ್ರಯತ್ನಿಸುವುದು
- ಸರ್ಕಾರಿ ಮತ್ತು ಅನುದಾನಿತ ಶಾಲಾ-ಕಾಲೇಜುಗಳ ಮಕ್ಕಳ ಕೌಶಲ ಹೆಚ್ಚಿಸಲು ತರಬೇತಿ ಹಾಗೂ ಕಾರ್ಯಗಾರಗಳನ್ನು ಆಯೋಜಿಸುವುದು
- ಅಶಕ್ತ ಪೋಷಕರ ಮಕ್ಕಳ ಶಿಕ್ಷಣಕ್ಕೆ ನೆರವು
- ಸಮುದಾಯ ಮಟ್ಟದಲ್ಲಿ ಸಾಮಾಜಿಕ ಸಮಸ್ಯೆಗಳ ಕುರಿತು ಅರಿವಿನ ಕಾರ್ಯಗಾರಗಳನ್ನು ನಡೆಸುವುದು

**ಉತ್ತಮ ಸಮಾಜಕ್ಕಾಗಿ ಉತ್ತಮ ಆರೋಗ್ಯ:**

- ಆರೋಗ್ಯ ಸಮಸ್ಯೆಗಳನ್ನು ಕುರಿತು ಸಮುದಾಯ ಮಟ್ಟದಲ್ಲಿಅರಿವು ಕಾರ್ಯಕ್ರಮಗಳನ್ನು ಆಯೋಜಿಸುವುದು
- ಹದಿಹರೆಯದವರಿಗೆ ಲೈಂಗಿಕ ವಿಚಾರಗಳ ಕುರಿತು ಅರಿವು ಮೂಡಿಸುವುದು
- ಆರೋಗ್ಯ ಶಿಬಿರಗಳನ್ನು ನಡೆಸುವುದು
- ಸಂಕಷ್ಟದಲ್ಲಿರುವ ಅನಾರೋಗ್ಯ ಪೀಡಿತ ಕುಟುಂಬಗಳಿಗೆ ನೆರವು ನೀಡುವುದು

**ಸ್ವಚ್ಛ ಪರಿಸರ ಅಭಿಯಾನ:**

- ಸ್ವಚ್ಛತೆಯ ಕುರಿತ ಅರಿವು ಮೂಡಿಸುವುದು
- ಪರಿಸರ ಸಂರಕ್ಷಣೆಯ ಬಗ್ಗೆ ಅರಿವು ಕಾರ್ಯಕ್ರಮಗಳನ್ನು ನಡೆಸುವುದು
- ಜಲ ಸಂರಕ್ಷಣೆಯ ಕುರಿತು ಕಾರ್ಯಕ್ರಮಗಳನ್ನು ಆಯೋಜಿಸುವುದು


**ವಕಾಲತ್ತು:**


- ಮಹಿಳೆಯರು, ಮಕ್ಕಳು ಮತ್ತು ಹಿರಿಯ ನಾಗರೀಕರ ಕಲ್ಯಾಣಕ್ಕಾಗಿ ಅಗತ್ಯ ನಿಯಮಗಳನ್ನು ಜಾರಿಗೊಳಿಸುವಲ್ಲಿ ವಕಾಲತ್ತು ವಹಿಸುವುದು

## 2021-22ರ ಅವಧಿಯ ಚಟುವಟಿಕೆಗಳ ವರದಿ

**ದಿನಾಂಕ : 22.04.2021**

ಜೆಎಸ್‌ಎಸ್ ಆಸ್ಪತ್ರೆಯ ಸಹಯೋಗದೊಂದಿಗೆ ಸೇವಾಯಾನ ಸಂಸ್ಥೆಯಲ್ಲಿ "ಲಂಗ್ಸ್ ಫಂಕ್ಷನ್ ಟೆಸ್ಟ್" ಕಾರ್ಯಗಾರವನ್ನು ಆಯೋಜಿಸಲಾಯಿತು.







Scanned with Oken Scanner

**ದಿನಾಂಕ : 23.06.2021**

ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಟ್ರಸ್ಟ್‌ನ ಮೈಸೂರು ಜಿಲ್ಲಾ ನಿರ್ದೇಶಕರಾದ ಶ್ರೀ ವಿಜಯ್‌ಕುಮಾರ್ ಹಾಗೂ ಟ್ರಸ್ಟ್‌ನ ಮೇಲ್ವಿಚಾರಕರು, ಸದಸ್ಯರುಗಳು ಸಂಸ್ಥೆಗೆ ಭೇಟಿ ನೀಡಿ, ಸಂಸ್ಥೆಯ ಆಶ್ರಿತರ ಯೋಗಕ್ಷೇಮ ವಿಚಾರಿಸಿ, ದಿನಸಿ ಪದಾರ್ಥಗಳ ಕಿಟ್ ವಿತರಿಸಿದರು






**ದಿನಾಂಕ : 23.06.2021**

ಕೋವಿಡ್-19 ಲಾಕ್‌ಡೌನ್ ಕಾರಣದಿಂದ ನಿಲ್ಲಿಸಲಾಗಿದ್ದ ಸಂಸ್ಥೆಯ ಟೈಲರಿಂಗ್ ವೃತ್ತಿ ತರಬೇತಿಯನ್ನು ಮತ್ತೆ ಪ್ರಾರಂಭಿಸಲಾಯಿತು.





**ದಿನಾಂಕ : 01.08.2021**

ಇನ್ನರ್ ವೀಲ್ ಕ್ಲಬ್‌ನ ಸದಸ್ಯರು ಸಂಸ್ಥೆಯ ಟೈಲರಿಂಗ್ ಘಟಕಕ್ಕೆ ಮೆಷಿನ್ ತೆಗೆದುಕೊಳ್ಳಲು ಚೆಕ್ ನೀಡಿರುತ್ತಾರೆ.



Scanned with Oken Scanner

**ದಿನಾಂಕ :15.08.2021**


ಸೇವಾಯಾನ ಸಂಸ್ಥೆಯಲ್ಲಿ 75ನೇ ಸ್ವಾತಂತ್ರ್ಯ ಸಂದರ್ಭದಲ್ಲಿ ಸಂಸ್ಥೆಗೆ ಗ್ಯಾಸ್ ಸ್ಟವ್ ನೀಡಿ ಹಾಗೂ ವಿಶೇಷ ಊಟದ ವ್ಯವಸ್ಥೆ ಮಾಡಿದ ಲಯನ್ಸ್ ಕ್ಲಬ್ ಆಫ್ ಮಿಡ್‌ಟೌನ್‌ನ ಎಲ್ಲಾ ಸದಸ್ಯರುಗಳಿಗೂ ಧನ್ಯವಾದಗಳನ್ನು ತಿಳಿಸುತ್ತೇವೆ.






**ದಿನಾಂಕ : 09.09.2021**

ಸ್ಕಾಟ್‌ಲ್ಯಾಂಡ್ ದೇಶದ ಸ್ಕಾಟೀಷ್ ಕೊಲಾಬರೇಷನ್ ಫಾರ್ ಪಬ್ಲಿಕ್ ಹೆಲ್ತ್ ಸಂಸ್ಥೆಯವರು ಭಾರತದ ಕೆಲವು ಆಯ್ದ ವೃದ್ಧಾಶ್ರಮಗಳಿಗೆ ಆನ್‌ಲೈನ್ ಕಾರ್ಯಗಾರವೊಂದನ್ನು ನಡೆಸಿದರು. ಇದರಲ್ಲಿ ಅವರು ಮೈಸೂರು ಜಿಲ್ಲೆಯಿಂದ ಸೇವಾಯಾನ ಸಂಸ್ಥೆಯನ್ನು ಆಯ್ಕೆ ಮಾಡಿಕೊಂಡಿದ್ದು, ಕಾರ್ಯಗಾರದಲ್ಲಿ ಭಾಗವಹಿಸಲಾಯಿತು.




Scanned with Oken Scanner

ದಿನಾಂಕ : 17.09.2021

ಶ್ರೀ ಕ್ಷೇತ್ರ ಧರ್ಮಸ್ಥಳದ ಬಿ.ಸಿ.ಟ್ರಸ್ಟ್ ನಿಂದ ಸೇವಾಯಾನ ಸಂಸ್ಥೆಯ ಸೇವಾಕಾರ್ಯಗಳಿಗಾಗಿ ಒಂದು ಲಕ್ಷ ರೂಪಾಯಿಗಳನ್ನು ದೇಣಿಗೆಯಾಗಿ ನೀಡಿರುತ್ತಾರೆ, ಈ ಸಂದರ್ಭದಲ್ಲಿ ಧರ್ಮಸ್ಥಳ ಸಂಸ್ಥೆಯ ಜಿಲ್ಲಾ ನಿರ್ದೇಶಕರಾದ ಶ್ರೀ ವಿಜಯಕುಮಾರ್ ನಾಗನಾಳ, ಯೋಜನಾಧಿಕಾರಿಗಳಾದ ಶಕುಂತಲಾ ಶೆಟ್ಟಿ ಹಾಗೂ ಇತರರು ಹಾಜರಿದ್ದರು.






ದಿನಾಂಕ : 23.09.2021

ಮನೋ-ಸಾಮಾಜಿಕ ಬದಲಾವಣೆಯ ಉದ್ದೇಶದಿಂದ ಸೇವಾಯಾನ ಸಂಸ್ಥೆಯ ಆಶ್ರಿತರನ್ನು ವಿಜಯನಗರ ಉದ್ಯಾನವನಕ್ಕೆ ಹಾಗೂ ಯೋಗನರಸಿಂಹಸ್ವಾಮಿ ದೇವಸ್ಥಾನಕ್ಕೆ ಕರೆದುಕೊಂಡು ಹೋಗಲಾಗಿತ್ತು. ಹಿರಿಯರು ಮಕ್ಕಳಂತೆ ಆಡಿ, ನಲಿದಿದ್ದನ್ನು ಕಣ್ತುಂಬಿಕೊಂಡಿದ್ದು ಖುಷಿಯೆನಿಸಿತು





**ದಿನಾಂಕ : 25.09.2022 :**


ಮೈಸೂರಿನ ದಟ್ಟಗಳ್ಳಿಯಲ್ಲಿರುವ ಕೌಟಿಲ್ಯ ಶಾಲೆಯು ತನ್ನ ವಿದ್ಯಾರ್ಥಿಗಳಿಂದ ಸಂಗ್ರಹ ಮಾಡಿದ ಹಳೆಯ ದಿನಪತ್ರಿಕೆಗಳನ್ನು ಸೇವಾಯಾನ ಸಂಸ್ಥೆಗೆ ನೀಡಿದೆ.






**ದಿನಾಂಕ :02.10.2021**

ಸೇವಾಯಾನ ಸಂಸ್ಥೆಯಲ್ಲಿ ಗಾಂಧಿ ಜಯಂತಿಯ ಕಾರ್ಯಕ್ರಮ:
ರಾಷ್ಟ್ರ ಕಂಡ ಮಹಾನ್ ನಾಯಕರುಗಳಾದ ಬಾಪೂಜಿ ಮತ್ತು ಶಾಸ್ತ್ರೀಜಿಯವರ ಜನ್ಮದಿನವನ್ನು ಸೇವಾಯಾನ ಸಂಸ್ಥೆಯ ಹಿರಿಯರು ಮನೆಯ ಹಬ್ಬದಂತೆ ಆಚರಿಸಿ, ಸಡಗರಿಸಿ, ತಮ್ಮೆಲ್ಲಾ ಅನಾರೋಗ್ಯದ ಸಮಸ್ಯೆಗಳನ್ನು ಮರೆತು ಸಿಹಿ ಸವಿದದ್ದು ಮಾತ್ರ ಅವಿಸ್ಮರಣೀಯ!! ಈ ಸಂದರ್ಭದಲ್ಲಿ ಶ್ರೀ ರಾಘವೇಂದ್ರ ಪ್ರಸಾದ್‌ರವರು ಸಂಸ್ಥೆಗೆ ಟಿವಿಯನ್ನು ನೀಡಿರುತ್ತಾರೆ ಹಾಗೂ ಕೆ.ಆರ್.ಎಸ್.ಸರ್ಕಾರಿ ಶಾಲೆಯ ಹಿರಿಯ ವಿದ್ಯಾರ್ಥಿಗಳಾದ ಶ್ರೀ ಸುರೇಶ್ ಮತ್ತು ಸ್ನೇಹಿತರು ಸಂಸ್ಥೆಗೆ ಭೇಟಿ ನೀಡಿ ಸಂಸ್ಥೆಯ ಆಶ್ರಿತರಿಗೆ ಅನುಕೂಲವಾಗುವಂತೆ ಶುದ್ಧ ಕುಡಿಯುವ ನೀರಿನ ಯಂತ್ರವನ್ನು ನೀಡಿರುತ್ತಾರೆ. ಇದೇ ಸಂದರ್ಭದಲ್ಲಿ ಹಿರಿಯರಾದ ಶ್ರೀ ದೊರೆಸ್ವಾಮಿಯವರು ಸರಳ ಯೋಗ ಮತ್ತು ಧ್ಯಾನದ ಮಹತ್ವವನ್ನು ತಿಳಿಸಿಕೊಟ್ಟಿರುತ್ತಾರೆ.






Scanned with Oken Scanner







**ದಿನಾಂಕ :11.10.2021**



ಕೆ.ಆರ್.ಎಸ್.ಸರ್ಕಾರಿ ಶಾಲೆಯ ಹಳೆಯ ವಿದ್ಯಾರ್ಥಿಗಳ ಸಂಘದ ಶ್ರೀಸುರೇಶ್ ಮತ್ತು ಸ್ನೇಹಿತರು ಸೇವಾಯಾನ ಸಂಸ್ಥೆಗೆ ದೇಣಿಗೆಯಾಗಿ ನೀಡಿದ್ದ ಕಂಪ್ಯೂಟರ್ ಒಂದನ್ನು ದಾನಿಗಳ ಒಪ್ಪಿಗೆ ಪಡೆದು, ಹಿರಿಯರಾದ ಶ್ರೀ ಪ್ರೇಮ್‌ಕುಮಾರ್‌ರವರಿಗೆ ನೀಡಲಾಯಿತು. (ಪ್ರೇಮ್‌ಕುಮಾರ್‌ರವರು ಕೊರೊನಾ ಚಿಕಿತ್ಸಾ ಸಂದರ್ಭದಲ್ಲಿ ಔಷಧಿಯ ವ್ಯತ್ಯಯದಿಂದಾಗಿ ತಮ್ಮೆರಡು ಕಾಲುಗಳನ್ನು ಕಳೆದುಕೊಂಡಿರುತ್ತಾರೆ).

**ದಿನಾಂಕ : 25.11.2021**

ಮನಸ್ಸಿನ ಮಾತುಗಳು ವ್ಯಕ್ತವಾಗೋಕೆ ಯಾವುದಾದರೊಂದು ವೇದಿಕೆ ಬೇಕಲ್ಲವೆ? ಸೇವಾಯಾನ ಸಂಸ್ಥೆಯಲ್ಲಿನ ಹಿರಿಯರು ಮಕ್ಕಳಾಗಿ ಬರೆದು, ಹರಿದು, ಬರೆದು, ಹರಿದು.. ಕೊನೆಗೆ ನಮಗೆ ಸಿಕ್ಕಿದ್ದು!!






Scanned with Oken Scanner

ದಿನಾಂಕ : 18.12.2021

ಮೈಸೂರು ವಿಶ್ವವಿದ್ಯಾನಿಲಯದ ಸಮಾಜಸೇವಾ ಕಾರ್ಯ ವಿದ್ಯಾರ್ಥಿಗಳು ಸೇವಾಯಾನ ಸಂಸ್ಥೆಗೆ ಭೇಟಿ ನೀಡಿ ಸಂಸ್ಥೆಯ ಬಗ್ಗೆ ಮಾಹಿತಿ ಪಡೆದಿರುತ್ತಾರೆ.






ದಿನಾಂಕ :11.01.2022

ಗ್ರಾಮ್ ಸಂಸ್ಥೆಯವರು ಆಯೋಜಿಸಿದ್ದ ಕಾರ್ಯಗಾರದಲ್ಲಿ ಭಾಗವಹಿಸಲಾಯಿತು.





ದಿನಾಂಕ : 17.01.2022

ಸೇವಾಯಾನ ಸಂಸ್ಥೆಯ ಎರಡನೆಯ ವರ್ಷದ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮ- ಕೋವಿಡ್ ಸಂದರ್ಭದ ಕಾರಣದಿಂದಾಗಿ ಅತ್ಯಂತ ಸರಳವಾಗಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು.








Scanned with Oken Scanner

**ದಿನಾಂಕ : 31.01.2022**

ಕೆ.ಆರ್.ನಗರ ತಾಲ್ಲೂಕಿನ ಗಜೇಂದ್ರ ಸಾಂಸ್ಕೃತಿಕ ಕಲಾತಂಡ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ ಸುಗಮ ಸಂಗೀತ ಕಾರ್ಯಕ್ರಮವನ್ನು ಸೇವಾಯಾನ ಸಂಸ್ಥೆಯಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಸಾಹಿತಿ ಹಾಗೂ ಪತ್ರಕರ್ತರಾದ ಡಾ. ಭೇರ್ಯ ರಾಮಕುಮಾರ್, ಜಿಲ್ಲಾ ಕಾಂಗ್ರೆಸ್ ಸಮಿತಿ ಉಪಾಧ್ಯಕ್ಷರಾದ ಹೆಡತಲೆ ಮಂಜುನಾಥ್, ಕೆಪಿಸಿಸಿ ಸದಸ್ಯರಾದ ಎನ್.ಭಾಸ್ಕರ್, ಸಮಾಜ ಸೇವಕರಾದ ವೀರರಾಜು ಕಂಪ್ಲಾಪುರ, ಸಂಗೀತ ಕಲಾವಿದರುಗಳು ಮತ್ತು ಸೇವಾಯಾನ ಸಂಸ್ಥೆಯ ಆಶ್ರಿತರು ಹಾಜರಿದ್ದರು.





**ದಿನಾಂಕ : 10.02.2022**

**ಶ್ರೀಮತಿ ಸುಜಾತರವರಿಂದ ಸಂಸ್ಥೆಯ ಆಶ್ರಿತರಿಗೆ ಮದ್ರೆಗಳ ಬಗ್ಗೆ ಕಾರ್ಯಗಾರವನ್ನು ಆಯೋಜಿಸಲಾಗಿತ್ತು.**





Scanned with Oken Scanner

ದಿನಾಂಕ : 11.02.2022


ಕೊಳ್ಳೇಗಾಲದ ನಿಸರ್ಗ ಕಾಲೇಜಿನ ವಿದ್ಯಾರ್ಥಿಗಳು ಸಂಸ್ಥೆಗೆ ಭೇಟಿ ನೀಡಿ ಸಂಸ್ಥೆಯ ಬಗ್ಗೆ ಮಾಹಿತಿ ಪಡೆದಿರುತ್ತಾರೆ.




ದಿನಾಂಕ : 21.02.2022

ಸೇವಾಯಾನ ಸಂಸ್ಥೆ ಹಾಗೂ ಪ್ಯಾಲಿಟಿವ್ ಕೇರ್‌ನ ಸಹಯೋಗದಲ್ಲಿ ಹಿರಿಯ ನಾಗರೀಕರಿಗಾಗಿ ಮೆಡಿಕಲ್ ಕ್ಯಾಂಪ್ ಆಯೋಜಿಸಲಾಗಿತ್ತು.





ದಿನಾಂಕ : 05.03.2022

ಸಂಸ್ಥೆಯ ಆಶ್ರಿತರನ್ನು ಮಹಾಶಿವರಾತ್ರಿಯ ಪ್ರಯುಕ್ತ ವಿಜಯನಗರ ಮೊದಲನೆಯ ಹಂತದಲ್ಲಿ ಆಯೋಜಿಸಿದ್ದ ಜ್ಯೋತಿರ್ಲಿಂಗ ವೀಕ್ಷಣೆಗೆ ಕರೆದುಕೊಂಡು ಹೋಗಲಾಗಿತ್ತು.



Scanned with Oken Scanner

ದಿನಾಂಕ : 10.03.2022


ಶಾರದಾವಿಲಾಸ ಬಿ.ಇಡಿ ಕಾಲೇಜಿನ ವಿದ್ಯಾರ್ಥಿಗಳಿಗೆ ಸೇವಾಯಾನ ಸಂಸ್ಥೆ ಮತ್ತು ಇನ್ನರ್‌ವೀಲ್ ಕ್ಲಬ್ ಮೈಸೂರು ಗೋಲ್ಡ್ ಸಹಯೋಗದಲ್ಲಿ ಪೇಪರ್ ಬ್ಯಾಗ್ ತಯಾರಿಕಾ ಕಾರ್ಯಗಾರವನ್ನು ಆಯೋಜಿಸಿದ್ದೆವು.






ದಿನಾಂಕ : 15.03.2022

ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯಿಂದ ಆಯೋಜಿಸಿದ್ದ "ಅಂತರ್ರಾಷ್ಟ್ರೀಯ ಮಹಿಳಾ ದಿನಾಚರಣೆ" ಕಾರ್ಯಕ್ರಮದಲ್ಲಿ ಸೇವಾಯಾನ ಸಂಸ್ಥೆಯ ಅಧ್ಯಕ್ಷರಾದ ಪ್ರಭಾಮಣಿಯವರಿಗೆ ಗೌರವ ಸಮರ್ಪಣೆ ಮಾಡಿರುತ್ತಾರೆ.




ಸನ್ಮಾನ ಪತ್ರ


ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ – 2022

Scanned with Oken Scanner

ದಿನಾಂಕ : 26.03.2022

ಅಪ್ಪು ಅಭಿನಯದ ಕೊನೆಯ ಚಿತ್ರ ನೋಡಬೇಕೆಂದು ಕಾತರಿಸಿದ್ದ ಸೇವಾಯಾನ ಸಂಸ್ಥೆಯ ಹಿರಿಯರನ್ನು ಇಂದು "ಜೇಮ್ಸ್" ಚಿತ್ರ ವೀಕ್ಷಣೆಗೆ ಕರೆದುಕೊಂಡು ಹೋಗಲಾಗಿತ್ತು.





ದಿನಾಂಕ : 27.03.2022

ಜೆ.ಪಿ.ನಗರದ ಪತಂಜಲಿ ಯೋಗ ಶಿಕ್ಷಣ ಸಂಸ್ಥೆಯ ವತಿಯಿಂದ ಭಜನೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.






Scanned with Oken Scanner

ಮಾಧ್ಯಮ ವರದಿಗಳು :

# ಸೇವಾಯಾನ ಟ್ರಸ್ಟ್‌ಗೆ ಆರ್ಥಿಕ ನೆರವು ವಿತರಣೆ

## ಶ್ರೀಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆಯವರಿಂದ ಸಹಾಯಹಸ್ತ

• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಹಿನಕಲ್‌ನ ಸೇವಾಯಾನ ಟ್ರಸ್ಟ್‌ಗೆ ಶ್ರೀಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ. ವೀರೇಂದ್ರ ಹೆಗ್ಗಡೆ ಅವರು ಮಂಜೂರು ಮಾಡಿದ ₹ 1 ಲಕ್ಷ ಆರ್ಥಿಕ ನೆರವು ನೀಡಿದೆ.

ಟ್ರಸ್ಟ್‌ನ ಅಧ್ಯಕ್ಷೆ ಪ್ರಭಾಮಣಿ ಅವರಿಗೆ ಜಿಲ್ಲಾ ನಿರ್ದೇಶಕ ಪಿ. ವಿಜಯಕುಮಾರ್ ನಾಗನಾಳ ಅವರು ಚೆಕ್ ಹಸ್ತಾಂತರಿಸಿದರು. ಆಕಸ್ಮಿಕ ಅವಗಡ, ಅಪಘಾತ, ಆರೋಗ್ಯ ಸಮಸ್ಯೆಯಿಂದ ಕುಟುಂಬಗಳು ಆರ್ಥಿಕ ಮುಗ್ಗಟ್ಟಿನಿಂದ ಮತ್ತು ಆಸ್ಪತ್ರೆಯಲ್ಲಿ ಬರುವ ಖರ್ಚು-ವೆಚ್ಚಗಳಿಂದ ಧಿಕ್ಕು ತೋಚದೆ ಈ ಜೀವನ ಸಾಕೆಂಬ ಚಿಂತೆಯಲ್ಲಿರುವ ಸಾವಿರಾರು ನೊಂದ ಕುಟುಂಬಗಳಿಗೆ ಡಿ. ವೀರೇಂದ್ರ ಹೆಗ್ಗಡೆ ಅವರು ನೊಂದ ಕುಟುಂಬಕ್ಕೆ ಬೀದಿಗೆ ಬರಬಾರದೆಂಬ ಆಶಯದೊಂದಿಗೆ ಸಮುದಾಯದಲ್ಲಿರುವ ನಿರ್ಗತಿಕರು, ಅಸಾಯಕರು ಮತ್ತು ವಿಕಲಚೇತನರನ್ನು ಗುರುತಿಸಿ ಟ್ರಸ್ಟ್ ಮೂಲಕ ಆರ್ಥಿಕ ನೆರವು ನೀಡಲಾಗುತ್ತಿದೆ.



ಅಧ್ಯಕ್ಷ ಪ್ರಭಾಮಣಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸ್ವ-ಸಹಾಯ ಸಂಘದ ಮೂಲಕ ಮಹಿಳೆಯರ ಸ್ವಾವಲಂಬನೆಯ ಬದುಕಿನಲ್ಲಿ ಎದುರಿಸಬೇಕಾದ ಎಲ್ಲಾ ಕಷ್ಟ-ನಷ್ಟಗಳಲ್ಲಿ ಪಾಲುದಾರರಾಗಿ ಸಂಘದ ಸದಸ್ಯರ ಕುಟುಂಬದಲ್ಲಿ ಉಂಟಾಗುವ ಸಮಸ್ಯೆಗಳಿಗೆ ಯೋಜನೆಯು ಸ್ಪಂದನೆಯನ್ನು ನೀಡುವುದರೊಂದಿಗೆ ಆರ್ಥಿಕ ನೆರವನ್ನು ನಮ್ಮ ಸೇವಾಯಾನ ಟ್ರಸ್ಟ್‌ಗೆ ನೀಡುತ್ತಿರುವುದು ನಮಗೆ ಹೆಮ್ಮೆ ಎನಿಸಿಕೊಳ್ಳುತ್ತದೆ ಎಂದು ನುಡಿದರು.

ಕಾರ್ಯಕ್ರಮದಲ್ಲಿ ತಾಲೂಕಿನ ಯೋಜನಾಧಿಕಾರಿ ಎನ್. ಶಕುಂತಲಾ, ಟ್ರಸ್ಟಿಗಳಾದ ಮಂಜು, ಅಕ್ಕಮ್ಮ, ಮೇಲ್ವಿಚಾರಕರಾದ ಸವಿತಾ ಶೆಟ್ಟಿ, ಸೇವಾಪ್ರತಿನಿಧಿಯಾದ ಮಂಗಳಾ, ಸುವಿಧಾ, ಸಹಾಯಕ ಶೋಭಾ, ಸಂಘದ ಸದಸ್ಯ ಅನುಸೂಯಮ್ಮ ಇದ್ದರು.

ಕನ್ನಡಪ್ರಭ Thu, 23 September 2021
https://kpepaper.asianetnews.com/c/63297561

# ‘ಪೋಷಕರನ್ನು ಸಲಹದ ಮಕ್ಕಳಿಗೆ ಕಾನೂನು ರೂಪಿಸಲಿ’


ಮೈಸೂರು: ವೃದ್ಧಾಪ್ಯದಲ್ಲಿ ತಂದೆ-ತಾಯಿಗಳನ್ನು ನೋಡಿಕೊಳ್ಳದಿರುವ ಮಕ್ಕಳಿಗೆ ಉಗ್ರ ಶಿಕ್ಷೆ ನೀಡುವಂತಹ ಕಾನೂನನ್ನು ರಾಜ್ಯ ಸರ್ಕಾರ ಜಾರಿಗೆ ತರಬೇಕು ಎಂದು ಸಾಹಿತಿ ಡಾ.ಧೇರ್ಯ ರಾಮಕುಮಾರ್ ಹೇಳಿದರು.

ಹಿನಕಲ್‌ನ ಸೇವಾಯಾನ ಟ್ರಸ್ಟ್‌ನ ವೃದ್ಧಾಶ್ರಮದಲ್ಲಿ ಗಜೇಂದ್ರ ಸಾಂಸ್ಕೃತಿಕ ತಂಡ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ನಡೆದ ಸುಗಮ ಸಂಗೀತ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.




ತಂದೆ-ತಾಯಿ ತಮ್ಮ ಜೀವನವನ್ನೇ ತ್ಯಾಗ ಮಾಡಿ ಮಕ್ಕಳಿಗೆ ವಿದ್ಯಾಭ್ಯಾಸ ಹಾಗೂ ಜೀವನವನ್ನು ಕಲ್ಪಿಸುತ್ತಾರೆ. ಆದರೆ ಮಕ್ಕಳು ಪೋಷಕರಿಗೆ ವಯಸ್ಸಾಗುತ್ತಿದ್ದಂತೆಯೇ ಮನೆಯಿಂದ ಆಚೆ ಹಾಕುತ್ತಾರೆ. ಅಂತಹ ಮಕ್ಕಳ ಆಸ್ತಿಯಲ್ಲಿ ಪೋಷಕರ ಪಾಲನೆಗಾಗಿ ಪಾಲು ನೀಡುವಂತಹ ಕಾನೂನನ್ನು ಸರ್ಕಾರ ಜಾರಿಗೆ ತರಬೇಕೆಂದು ಹೇಳಿದರು.

ಜಿಲ್ಲಾ ಕಾಂಗ್ರೆಸ್ ಸಮಿತಿ ಉಪಾಧ್ಯಕ್ಷ ಹಡತಲೆ ಮಂಜುನಾಥ್, ಕೆ.ಪಿ.ಸಿ.ಸಿ. ಸದಸ್ಯರಾದ ಎಸ್.ಭಾಸ್ಕರ್, ಟ್ರಸ್ಟ್ ಅಧ್ಯಕ್ಷರಾದ ಎಸ್.ಪ್ರಭಾಮಣಿ, ಸೌಭಾಗ್ಯ ಪ್ರಭು ಹಾಜರಿದ್ದರು.




Women's Day Special: 240ಕ್ಕೂ ಹೆಚ್ಚು ವೃದ್ಧರಿಗೆ ಆಸರೆಯಾದ ಮಹಿಳೆ
Prabhamani | Mysore | Dighvijay News




ವಿಶ್ವ ಮಹಿಳಾ ದಿನಾಚರಣೆ
www.youtube.com

https://youtu.be/Rpih-LqwpZk

5:42 PM

ಧನ್ಯವಾದಗಳು.